ಶ್ರೀ ಸಿ.ಬೈರೇಗೌಡ :- ಹಾಗಾದರೆ ಮಾನ್ಯ ಅಧ್ಯಕ್ಷರೇ, ಸ್ವಲ್ಪ ದಯವಿಟ್ಟು ಕೇಳಿ. ಇದೂ ಕೂಡ ನಾಳೆ ಪತ್ರಿಕೆಯಲ್ಲಿ ಬರುತ್ತದೆ. ಅವರು ಹೇಳಿರತಕ್ಕಂಥಾದ್ದು ಕೂಡ ನಾಳೆ ಪತ್ರಿಕೆಯಲ್ಲಿ ಬರುತ್ತದೆ. ಅವರು ಕಾನೂನಿನ ವಿಧಿ ಮೀರಿ ಮಾತನಾಡುತ್ತಿದ್ದಾರೆ.....

ಅಧ್ಯಕ್ಷರು :- ನಾನು ಕಡತದಿಂದ ತೆಗೆಯುತ್ತೇನೆ. ಅವರು ತಮ್ಮ ಮೇಲೆ ಏನಾದರೂ ಆರೋಪ ಮಾಡಬೇಕಾದರೆ ನೋಟೀಸ್ ಕೊಡಲಿ. ನಾನು ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಸಿ.ಬೈರೇಗೌಡ :- ನಿನ್ನೆ ಅವರು ಮಾತನಾಡಿದ್ದು ಪತ್ರಿಕೆಯಲ್ಲಿ ಬಂದಿದೆ.

ಅಧ್ಯಕ್ಷರು : ನಾವು ಪುನ : ಪತ್ರಿಕೆಯವರನ್ನು ಕರೆಸಿ ಎಕ್ಸ್‌ಪಂಜ್ ಮಾಡಿರುವುದನ್ನು ಹೇಳುತ್ತೇವೆ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ

(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):-

1. ಶ್ರೀ ಎಂ.ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿ) ಅವರ ಪರವಾಗಿ ಮಾನ್ಯ ಅಧ್ಯಕ್ಷರೇ

1978 ನೇ ಇಸವಿಯ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮದ 8(3) ನೇ ಕಲಮಿನ ಮೇರೆಗೆ :

ದಿನಾಂಕ 4-1-1993 ರಂದು ಹೊರಡಿಸಲಾದ ಎಫ್‌ಡಿ 25 ಎಸ್‌ಆರ್‌ಸಿ 91ನೇ ಕ್ರಮಾಂಕದ ಅಧಿಸೂಚನೆ ,

1991 ನೇ ಕರ್ನಾಟಕ ನಾಗರೀಕ ಸೇವೆಗಳ (ಹಿರಿಯ ವೇತನ ಶ್ರೇಣಿಗೆ ಸ್ವಯಂಚಾಲಿತ ವಿಶೇಷ ಮುಂಬಡ್ತಿ) ನಿಯಮಾವಳಿಗಳಿಗೆ ದಿನಾಂಕ 25-8-1992 ರಂದು ಹೊರಡಿಸಲಾದ ಎಫ್‌ಡಿ 25 ಎಸ್‌ಆರ್‌ಪಿ 91ನೇ ಕ್ರಮಾಂಕದ ಅಧಿಸೂಚನೆಗೆ ತಿದ್ದುಪಡಿಯನ್ನು ಮಂಡಿಸುತ್ತೇನೆ.

2. ಶ್ರೀ ಚೌಡರೆಡ್ಡಿ (ಗೃಹ ಮಂತ್ರಿ) ಮಾನ್ಯ ಅಧ್ಯಕ್ಷರೇ,

1964 ನೇ ಇಸವಿಯ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮದ 22ನೇ ಕಲಮಿನ ಮೇರೆಗೆ

ಬೆಳಗಾಂನ ಮರಾಠಾಲೈಟ್ ಇನ್‌ಫ್ಯಾಂಟ್ರಿ ರೆಜಿಮೆಂಟ್ ಕೇಂದ್ರದಲ್ಲಿ 35 ಎಂಎಂ ಚಲನಚಿತ್ರ ಪ್ರದರ್ಶಿಸಲು ಅನುಮತಿ ನೀಡುವ ಸಂಬಂಧದಲ್ಲಿ ದಿನಾಂಕ 27-8-1994 ರಂದು ಹೊರಡಿಸಲಾದ ಹೆಚ್‌ಡಿ 84 ಸಿಎನ್‌ಎ 94ನೇ ಕ್ರಮಾಂಕದ ಆದೇಶವನ್ನು ಮಂಡಿಸುತ್ತೇನೆ.

ಅಧ್ಯಕ್ಷರು :- ಕಾಗದ ಪತ್ರಗಳನ್ನು ಮಂಡಿಸಲಾಯಿತು.

3. ಶ್ರೀ ಹೆಚ್. ವಿಶ್ವನಾಥ್ (ಅರಣ್ಯ ಮಂತ್ರಿ) ಅವರು: -

1956ನೇ ಸಾಲಿನ ಕಂಪನಿಗಳ ಕಾಯ್ದೆಯ 619 (ಎ) ಕಲಮಿನ ಮೇರೆಗೆ :-

1992-93ನೇ ಸಾಲಿನ ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತದ 15ನೇ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

ಅಧ್ಯಕ್ಷರು :- ಮಂಡಿಸಲಾಯಿತು.

ಕಾರ್ಯದರ್ಶಿಗಳ ವರದಿ

ಕಾರ್ಯದರ್ಶಿಗಳು :- ಮಾನ್ಯ ಅಧ್ಯಕ್ಷರೇ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಇಡುತ್ತೇನೆ.

1) ಕರ್ನಾಟಕ ಬಾಡಿಗೆ ನಿಯಂತ್ರಣ ತಿದ್ದುಪಡಿ ವಿದೇಯಕ1 994 ಅನುಬಂಧ-I

2) ಕರ್ನಾಟಕ ಭೂ ಕಂದಾಯ ತಿದ್ದುಪಡಿ ವಿಧೇಯಕ 1994. ಅನುಬಂಧ-II

ಅಧ್ಯಕ್ಷರು :- ಮಂಡಿಸಲಾಯಿತು

ವಿತ್ತೀಯ ಕಾರ್ಯಕಲಾಪಗಳು

ಅಧ್ಯಕ್ಷರು :- ಈಗ 1994 - 95ನೇ ಸಾಲಿನ ಪೂರಕ ಅಂದಾಜುಗಳ ಮೊದಲನೇ ಕಂತಿನ ಮೇಲಿನ ಚರ್ಚೆ ಹಾಗೂ ಮತಕ್ಕೆ ಹಾಕುವುದು.

ಅಧ್ಯಕ್ಷರು :- ಈಗ 1994-95ನೇ ಸಾಲಿನ ಪೂರಕ ಅಂದಾಜುಗಳ ಮೊದಲನೇ ಕಂತಿನ ಮೇಲಿನ ಚರ್ಚೆ ಹಾಗೂ ಮತಕ್ಕೆ ಹಾಕುವುದು.

ಶ್ರೀ ಆರ್.ವಿ.ದೇಶಪಾಂಡೆ :- ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳು ಎಲ್ಲಿದ್ದಾರೆ? ನಾವು ರೈಸ್ ಮಾಡಿದ ಪ್ರಶ್ನೆಗಳಿಗೆ ಉತ್ತರ ಕೊಡಲು ಉಪ ಮುಖ್ಯಮಂತ್ರಿಗಳು ಬರಬೇಕು, ಅವರು ಬರಬೇಕು ಇವರು ಬರಬೇಕು ಎಂದು ಹೇಳುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಬರಲಿ. ಅಲ್ಲಿಯವರೆಗೂ ನಾವು ಭಾಗವಹಿಸುವುದಿಲ್ಲ ನಾವು ಏತಕ್ಕೆ ನಿಮಗೆ ಸಹಕಾರ ಕೊಡಬೇಕು?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ :- ಮಾನ್ಯ ಅಧ್ಯಕ್ಷರೇ, ಇಂದು ಎರಡು ಸಭೆಗಳನ್ನು ಒಂದೇ ಸಮಯಕ್ಕೆ ಕರೆಯಲಾಗಿದೆ ಮೇಲ್ಮನೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳದ್ದೇ ಕಾರ್ಯಕಲಾಪಗಳು ಇವೆ. ಆದ್ದರಿಂದ ಈಗ ಕಾಗೋಡು ತಿಮ್ಮಪ್ಪನವರು ತಮ್ಮ ವಿಧೇಯಕವನ್ನು ಮಂಡಿಸುತ್ತಾರೆ. ಅದರ ಮೇಲೆ ತಾವು ಮಾತನಾಡಬಹುದು.

ಶ್ರೀ ವಾಟಾಳ್ ನಾಗರಾಜ್ :- ಸ್ವಾಮಿ ಕೆಲವು ಹೇಳಿಕೆಗಳನ್ನು ಸರ್ಕಾರ ಕೊಡಬೇಕಾಗಿದೆ.